ಖರ್ಚಾದ ಹಣ

ರೂ. 5.882 ಲಕ್ಷ - ಉದ್ಯೋಗ ಸೃಜನೆಗಾಗಿ.

ರೂ. 2.903 ಲಕ್ಷ - ಕುಡಿಯುವ ನೀರಿನ ಪೂರೈಕೆಗಾಗಿ.

ಈ) ಈ ರೀತಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಉ) ಮೇಲೆ (ಈ) ಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ

1283 - ಶ್ರೀ ಉಮೇಶ್ ಭಟ್ (ಅಂಕೋಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) 1990-91ನೇ ಸಾಲಿನಲ್ಲಿ ದೇವಸ್ಥಾನಗಳ ಅಭಿವೃದ್ಧಿಗೋಸ್ಕರ ರಾಜ್ಯ ಸರ್ಕಾರ ಗುಲ್ಬರ್ಗಾ ಜಿಲ್ಲೆಗೆ ಎಷ್ಟು ಅನುದಾನ ನೀಡಿದೆ?

ಆ) ಬೇರೆ ಜಿಲ್ಲೆಯ ದೇವಸ್ಥಾನಗಳ ಅಭಿವೃದ್ಧಿಗೋಸ್ಕರ ಅಷ್ಟೇ ಪ್ರಮಾಣದ ಅನುದಾನವನ್ನು ನೀಡಲಾಗಿದೆಯೇ?

ಇ) ಅನುದಾನ ನೀಡದೇ ಇದ್ದಲ್ಲಿ ಕಾರಣಗಳೇನು?

ಈ) ಅನುದಾನ ನೀಡುವದಿದ್ದಲ್ಲಿ ಎಂದಿನಿಂದ ನೀಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ರೂ. 25,90,000-00.

ಆ) ಇಲ್ಲ.

ಇ) ಪ್ರತಿ ಜಿಲ್ಲೆಯಲ್ಲಿರುವ ದೇವಸ್ಥಾನಗಳ ಹಣಕಾಸಿನ ಪರಿಸ್ಥಿತಿ, ಹಿಂದಿನ ವರ್ಷಗಳಲ್ಲಿ ಪ್ರತಿ ಜಿಲ್ಲೆಗೆ ಬಿಡುಗಡೆಮಾಡಿದ ಅನುದಾನದ ಮೊತ್ತ ಹಾಗೂ ಪ್ರತಿ ಜಿಲ್ಲೆಗಳಿಂದ ಅನುದಾನಕ್ಕೋಸ್ಕರ ಬಂದ ಮನವಿ. ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅನುದಾನವನ್ನು ಮಂಜೂರು ಮಾಡಲಾಗಿದೆ.

ಈ) 30-3-1991 ರ ಒಳಗೆ

ಸವಣೂರಿನಲ್ಲಿ ತೋಟಗಾರಿಕೆಯ ಕಾಲೇಜು ಪ್ರಾರಂಭ

1284 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರಿನಲ್ಲಿ ತೋಟಗಾರಿಕೆ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಸದರಿ ಉದ್ದೇಶಕ್ಕಾಗಿ ಸವಣೂರು ತಾಲ್ಲೂಕು ಪಂಚಾಯತ್ ಸಮಿತಿಯ ತನ್ನ 50 ಎಕರೆ ಜಮೀನನ್ನು ಹಾಗೂ ಉಚಿತ ಕಟ್ಟಡವೊಂದನ್ನು ಕೊಡಲು ಮುಂದೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸದರಿ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಇಲ್ಲ.

ಆ) ಸರ್ಕಾರದ ಮಟ್ಟದಲ್ಲಿ ಮಾಹಿತಿ ಇರುವುದಿಲ್ಲ

ಇ) ಉದ್ಭವಿಸುವುದಿಲ್ಲ.